ಕೆಳಗೆ ಹೋಗುತ್ತೇನೆ. ಚೌಕಿದಾರನನ್ನು ಮಾತನಾಡಿಸಿ ಎಂಟನೇ ಮಜಲೆಯ ಮೇಲಿನ ನನ್ನ ಗೆಳೆಯರನ್ನೂ ಕಂಡು ಬರುತ್ತೇನೆ. ಬಹಳ ದಿನಗಳಾದವು ಕಾಣದೇ" ಎಂದ. ಇದರಲ್ಲಿ ಅಸಹಜವಾದದ್ದು ಇಲ್ಲವೇ ಆತಂಕಕ್ಕೆ ಕಾರಣವಾದದ್ದು ಏನೂ ಹೆಂಡತಿಗಾಗಲೀ ಸೊಸೆಯಂದಿರಿಗಾಗಲೀ ತೋರಲಿಲ್ಲ. ಒಂದು ತಿಂಗಳು ಮನೆಯಲ್ಲೇ ಕೂತವನಿಗೆ ಬೇಸರವಾಗಿರಬೇಕು, ಮೇಲಾಗಿ, ಚೌಕಿದಾರನನ್ನು ಮಾತನಾಡಿಸಿದ ಮೇಲಾದರೂ ತಲೆ ಹೊಕ್ಕಿಬಿಟ್ಟ ಸಂಶಯ ದೂರವಾದೀತು ಎಂದೂ ತೋರಿತು. ಜ್ಯಾಕೆಟ್ಟು ಟೋಪಿ ಬೇಡವಾಗಿತ್ತೇನೋ ಅನ್ನಿಸಿದರೂ, ಹಿಂದೆ ಒಮ್ಮೆ ಉಟ್ಟ ಬಟ್ಟೆಯಲ್ಲೇ ಭೇಟಿ ಕೊಟ್ಟ ಮನೆಗೆ ಇನ್ನೊಮ್ಮೆ ಹೋಗುವ ಉತ್ಸಾಹದಲ್ಲಿದ್ದವನಿಗೆ ನಿರುತ್ಸಾಹಗೊಳಿಸುವ ಮನಸ್ಸಾಗಲಿಲ್ಲ ಯಾರಿಗೂ.

ಕುಸುಮಾ ಬೇನ್ ಹಿರಿಯ ಸೊಸೆ, ಸಾಲೆಯಿಂದ ಬರುವ ತನ್ನ ಇಬ್ಬರು ಮಕ್ಕಳನ್ನೂ ನೆಗೆಣ್ಣೆಯ ಒಂದು ಮಗುವನ್ನೂ ಬಸ್ಸಿನಿಂದ ಇಳಿಸಿಕೊಳ್ಳಲು ನಿಲ್ದಾಣಕ್ಕೆ ಹೋಗುವ ಸರದಿ ಇವತ್ತು ಅವಳದಾಗಿತ್ತು. ಅತ್ತೆ, ನೆಗೆಣ್ಣೆಯರಿಗೆ ಹೇಳಿ ಮಾವನ ಜೊತೆಗೆ ಮನೆಯ ಹೊರಗೆ ಬಿದ್ದ ಕುಸುಮಾ ಬೇನ್ ಲಿಫ್ಟ್ ಹಿಡಿದು ತಳಮಜಲೆಯನ್ನು ತಲುಪಿದ ಮೇಲೆ ತಾನೇ ಮುಂದಾಗಿ ಡ್ಯೂಟಿಯ ಮೇಲಿದ್ದ ಚೌಕಿದಾರನನ್ನು ಮಾತನಾಡಿಸಿದಳು. ಊರಿಗೆ ಹೋದ ಚೌಕಿದಾರ ಮುಂಬಯಿಗೆ ಬಂದಿರುನೆಂದೂ, ಎರಡನೆಯ ಪಾಳಿಗೆ ಬಂದರೆ ಇನ್ನು ಹದಿನೈದು ಇಪ್ಪತ್ತು ಮಿನಿಟುಗಳಲ್ಲಿ ಅವನು ಇಲ್ಲಿ ಹಾಜರನಾಗಬೇಕೆಂದೂ ತಿಳಿಯಿತು. ಈಗ ಮಾತನಾಡಿದವನು ರಾವ್‌ಜೀಭಾಯಿ ಈ ಮೊದಲು ಭೇಟಿಯಾದ ಚೌಕಿದಾರನಾಗಿರಲಿಲ್ಲ. ಮೂರನೇಯವನೇ ಆಗಿದ್ದ. ಆದರೆ ಅವನ ಬಗ್ಗೆ ಎಲ್ಲ ಗೊತ್ತಿದ್ದವನ ಹಾಗೆ – ''ಅವನು ಬಂದರೆ ನಾನೇ ಅವನನ್ನು ಮೇಲೆ ಕಳಿಸುತ್ತೇನೆ. ಐದನೇ ಮಜಲಿನ ಮನೆಯಲ್ಲವೆ?'' ಎಂದು ಕೇಳಿದಾಗ, "ಬೇಡ ನಾನೇ ಇಲ್ಲಿ ಕಾಯುತ್ತೇನೆ. ನಿನ್ನ ಜೊತೆಗೆ ಮಾತನಾಡುತ್ತ ಆಗದೆ?" ಎಂದು, ಸಂಕೋಚದಿಂದ ಮೈ ಮುದುಡಿನಿಂತ ಹುಡುಗನ ಭುಜ ಚಪ್ಪರಿಸಿದ. ಆಮೇಲೆ ಸೊಸೆಯ ಕಡೆಗೆ ಇರುಗಿ, "ನೀನು ಹೋಗು ಮಗಳೇ. ನಾನು ಆಮೇಲೆ ಎಂಟನೇ ಮಜಲೆಯ ಗೆಳೆಯರನ್ನು ಮಾತನಾಡಿಸಿ ಹೊತ್ತು ಮುಳುಗುವ ಮೊದಲೇ ಮನೆಗೆ ಬರುತ್ತೇನೆ" ಎಂದು ಸೊಸೆಯನ್ನು ಬೀಳ್ಕೊಟ್ಟ.

ಇವೇ, ರಾವ್‌ಜೀಭಾಯಿ ತನ್ನ ಮನೆಯವರೊಡನೆ ಆಡಿದ, ಕೊನೆಯ ಮಾತುಗಳಾಗಿದ್ದುವೆಂದೂ ಚೌಕಿದಾರನನ್ನು ಮಾತನಾಡಿಸಿಯಾದ ಮೇಲೆ ಎಂಟಲೇ ಮಜಲೆಗೆ ಹೋಗುತ್ತೇನೆ ಎಂದವನು ಅಲ್ಲಿ ಹೋಗಿರಲೇ ಇಲ್ಲವೆಂದೂ ಗೊತ್ತಾದದ್ದು ತೀರ ತಡವಾಗಿ! ಆ ದಿನ ಸಂಜೆ, ಮುನ್ನಾದಿನವೇ ಮಾತನಾಡಿಕೊಂಡಂತೆ, ಆಫೀಸಿನಿಂದ ಹಿಂತಿರುಗಿ ಬರುವಾಗ ಸೋರಾಬನ ಜೊತೆಗೆ ಮ್ಯಾಕೆಲ್‌ನೂ ಇದ್ದ. ಇಬ್ಬರೂ ಕೂಡಿಯೇ, ರಜೆ ಮುಗಿಸಿ ಡ್ಯೂಟಿ ಸೇರಿದ ಚೌಕಿದಾರನನ್ನು ಕಂಡು, ತುಸು ಹೊತ್ತು ಬಿಟ್ಟು ಮೇಲೆ ಬರಬೇಕೆಂದು ಹೇಳಿ ಮೇಲೆ ಹೋದರು. ಚೌಕಿದಾರ ಬಂದ ಕೂಡಲೇ ಸೋರಾಬದ, ಒಂದು ತಿಂಗಳ ಹಿಂದೆ ಗೇಟಿನಲ್ಲಿ ಕಾಣಿಸಿಕೊಂಡ ಹುಡುಗನ ಬಗ್ಗೆ ಕೇಳಿದ. ಕೆಲವು ತಾಸುಗಳ ಮೊದಲು, ಡ್ಯೂಟಿಗೆ ಹಾಜರಾದ ಕೆಲವು ನಿಮಿಷಗಳಲ್ಲೇ ತನ್ನನ್ನು ಕಂಡು ಮಾತನಾಡಿಸಿದ ಅಪರಿಚಿತ ಮುದುಕನೊಬ್ಬ ಕೇಳಿದ ಪ್ರಶ್ನೆಗಳನ್ನೇ ಈಗ ಸೊಸೈಟಿಯ ಸೆಕ್ರೆಟರಿಯೂ ಕೇಳಿದಾಗ ಕಕ್ಕಾಬಿಕ್ಕಿಯಾದ ಚೌಕಿದಾರ ಹೇಳಿದ– "ಅರಿಯದೇನೆ ನನ್ನ ಕೈಯಿಂದಾಗಿರಬಹುದಾದ ಗಲತಿ ಮಾಫು ಮಾಡಬೇಕು,